ಇವರಿಗೆ,
ಅಧ್ಯಕ್ಷರು,
ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಲಿ.,
ರಾಮಮೋಹನಪುರ,
ಬೆಂಗಳೂರು-21.

ಇವರಿಂದ,
________________ ,
________________ ,
________________ ,
________________ ,
ಬೆಂಗಳೂರು.

ಮಾನ್ಯರೆ,

ವಿಷಯ:- ಸದಸ್ಯತನ ವಜಾಗೊಳಿಸುವ ಬಗ್ಗೆ.

- - -

ಈ ಕೆಳಗೆ ಸಹಿ ಮಾಡಿರುವ ನಾನು ತಮ್ಮ ಬ್ಯಾಂಕಿನಲ್ಲಿ ಸದಸ್ಯತನ ಹೊಂದಿದ್ದು, ನನ್ನ ಸದಸ್ಯತನದ ಸಂಖ್ಯೆ __________ ವುಳ್ಳದ್ದಾಗಿರುತ್ತೆ. ಈಗ ನಾನು ಕಾರ್ಯನಿಮಿತ್ತ ಬೆಂಗಳೂರನ್ನು ಬಿಟ್ಟು ಬೇರೆ ಊರಿಗೆ ಹೋಗುವುದರಿಂದ ಮತ್ತು ನಿಮ್ಮ ಬ್ಯಾಂಕಿನಿಂದ ನನಗೆ ಯಾವುದೇ ಸಾಲ ಸೌಲಭ್ಯಗಳ ಅವಶ್ಯಕತೆ ಇಲ್ಲದಿರುವುದರಿಂದ ಹಾಗು ಸದಸ್ಯತನವನ್ನು ಮುಂದುವರಿಸಲು ನನಗೆ ಇಷ್ಟವಿಲ್ಲದಿರುವುದರಿಂದ ಸ್ವಪ್ರೇರಣೆಯಿಂದ ಈ ಮೂಲಕ ತಮ್ಮನ್ನು ವಿನಂತಿಸುವುದೇನೆಂದರೆ, ನನ್ನ ಸದಸ್ಯತನವನ್ನು ವಜಾಗೊಳಿಸಿ ನನ್ನ ಬಾಬ್ತು ಷೇರು ಹಣ, ಉಳಿತಾಯ ಖಾತೆ ಹಣ, ಆರ್.ಡಿ.ಖಾತೆ ಹಣ, ಡಿವಿಡೆಂಟ್ ಇತ್ಯಾದಿ ಪ್ರಯೋಜನಾಂಶಗಳನ್ನು ನನಗೆ ನೀಡಬೇಕಾಗಿ ತಮ್ಮಲ್ಲಿ ನನ್ನ ಸವಿನಯ ಪ್ರಾರ್ಥನೆ.

ಈ ಅರ್ಜಿಯ ಸಂಗಡ ನನ್ನ ಹೆಸರಿನ ಷೇರು ಸರ್ಟಿಫಿಕೇಟ್, ಪಾಸ್ ಪುಸ್ತಕ, ಗುರುತಿನ ಚೀಟಿ, ಇತ್ಯಾದಿ ದಾಖಲಾತಿಗಳನ್ನು ತಮ್ಮ ಬ್ಯಾಂಕಿನ ವಶಕ್ಕೆ ಒಪ್ಪಿಸಿರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ತಾರೀಖು:
ಬೆಂಗಳೂರು.